ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in
Phone : 080 - 26422372, 26422373, 26422374, Fax - 26422377
ಡಿಎಸ್ಇಆರ್‌ಟಿ
DSERT

SEEU/ಬಾನುಲಿ.ಕಾ.ಮು/17/17-18 ದಿನಾಂಕ:12.01.2018

## ಸುತ್ತೋಲೆ

ವಿಷಯ: ರೇಡಿಯೋ ಕಾರ್ಯಕ್ರಮದ ಅಡಿಯಲ್ಲಿ ಸರ್ಕಾರಿ /ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ ರೇಡಿಯೋ ಪಾಠ ಪ್ರಸಾರದ ಪ್ರಯೋಜನ ಪಡೆಯುವ ಕುರಿತು.

ಉಲ್ಲೇಖ:ಸರ್ಕಾರದ ಆದೇಶ ಸಂಖ್ಯೆ:ಇಡಿ 02 ಎಂಪಿ 2018, ಬೆಂಗಳೂರು, ದಿನಾಂಕ:08.01.2018 ರನ್ವಯ

---

ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖಿತ ಆದೇಶದನ್ವಯ 16.01.2018ರಿಂದ ಅಪರಾಹ್ನ 2.35 ರಿಂದ 3.00 ಗಂಟೆಯವರೆಗೆ 10ನೇ ತರಗತಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಇಂಗ್ಲಿಷ್ ವಿಷಯದಲ್ಲಿ 14 ಆಕಾಶವಾಣಿ ಕೇಂದ್ರಗಳ ಮೂಲಕ ಎಸ್.ಎಸ್.ಎಲ್.ಸಿ. ಪಾಸಿಂಗ್ ಪ್ಯಾಕೇಜ್ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುವುದು. ಪ್ರಸಾರಕ್ಕೆ ಸಂಬಂಧಪಟ್ಟ ವೇಳಾಪಟ್ಟಿ ಹಾಗೂ ಪಠ್ಯವಸ್ತುವಿನ ವಿವರವನ್ನು ತಮಗೆ ಇ-ಮೇಲ್ ಮಾಡಲಾಗಿದೆ ಹಾಗೂ ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್ನಲ್ಲಿಯೂ ಸಹ ಅಪ್ಲೋಡ್ ಮಾಡಲಾಗಿದೆ. ವೆಬ್ ಸೈಟ್ ವಿಳಾಸ http://dsert.kar.nic.in . ತಮ್ಮ ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ /ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರಿಗೆ ರೇಡಿಯೋ ಪಾಠ ಪ್ರಸಾರದ ಮಾಹಿತಿ ನೀಡಿ ಪ್ರಯೋಜನ ಪಡೆಯಲು ತಿಳಿಸಲು ಸೂಚಿಸಿದೆ.

ಉಲ್ಲೇಖಿತ ಆದೇಶದನ್ವಯ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪ್ರೌಢ ಶಾಲೆಗಳಲ್ಲಿ ರೇಡಿಯೋ ಹೊಂದಿಲ್ಲದಿದ್ದರೆ ಶಾಲಾ ಸಂಚಿತ ನಿಧಿಯಲ್ಲಿ ಲಭ್ಯವಿರುವ ಅನುದಾನದಡಿಯಲ್ಲಿ **ರೂ.1000/- ಮಿತಿಯೊಳಗೆ 03 ದಿನಗಳೊಳಗಾಗಿ** ಒಂದು ರೇಡಿಯೋ ಖರೀದಿಸಲು ದಿನಾಂಕ 10.01.2018 ರ ಪತ್ರದಲ್ಲಿ ಸೂಚಿಸಲಾಗಿದ್ದು ಮತ್ತೊಮ್ಮೆ ಖಚಿತಪಡಿಸಿಕೊಳ್ಳಲು ತಿಳಿಸಿದೆ.

ತಮ್ಮ ನಂಬುಗೆಯ,

12.01.18

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
ಬೆಂಗಳೂರು.

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ)/ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಸೂಕ್ತ ಕ್ರಮ.